ಓ ಎಸ್ .ನಂ.**215/2012**

**ಪಿಡಬ್ಲ್ಯು – 1**

ದಿನಾಂಕ **10-11-2025** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರವರಿಂದ.**

ಸರ್ವೇ ನಂ.190 ಬ್ಲಾಕ್ ಪ್ಲಾಟ್ ನಂ.20 ಇದರ ಪಹಣಿ ಪತ್ರಿಕೆಯನ್ನು ನಿಪಿ.5 ಎಂದು, ಎಮ್ ಆರ್ ನಂ. 1318 ಇದರ ದೃಢೀಕೃತ ಪ್ರತಿಯನ್ನು ನಿಪಿ.6 ಎಂದು, ಎಮ್ ಆರ್ ನಂ.747 ಇದರ ದೃಢೀಕೃತ ಪ್ರತಿಯನ್ನು ನಿಪಿ.7 ಎಂದು, ಎಮ್ ಆರ್ ನಂ.1594 ಇದರ ದೃಢೀಕೃತ ಪ್ರತಿಯನ್ನು ನಿಪಿ.8 ಎಂದು, ದೃಢೀಕೃತ ಸರ್ವೇ ನಂ.190 ಪಿ ಪ್ಲಾಟ್ ನಂ.20 ಇದರ ದೃಢೀಕೃತ ಪ್ರತಿಯನ್ನು ನಿಪಿ.9 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. ಎ ಸಿ ಪಿ ವಕೀಲರವರಿಂದ**

1. ಪ್ಲಾಟ್ ನಂ.20 ಹಾಗೂ 21 ಬೇರೆ ಬೇರೆ ಎಂದರೆ ಸಾಕ್ಷಿಯು ಮೊದಲು ಕೈಯಿಂದ ಬರೆದಾಗ ಪ್ಲಾಟ್ ನಂ.21 ಇತ್ತು, ಹಾಗೂ ಕಂಪ್ಯೂಟರ್ ದಲ್ಲಿ ಪ್ಲಾಟ್ ನಂ.20 ಎಂದು ನಮೂದು ಆಗಿರುತ್ತದೆ. ಕೈಯಿಂದ ಬರೆದಾಗ ಪ್ಲಾಟ್ ನಂ.21 ಇತ್ತು, ಹಾಗೂ ಕಂಪ್ಯೂಟರ್ ದಲ್ಲಿ ಪ್ಲಾಟ್ ನಂ.20 ಎಂದು ನಮೂದು ಆದ ಬಗ್ಗೆ ಆದೇಶದ ಪ್ರತಿಯನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಮ್ಯೂಟೇಶನ್ ಹಾಜರು ಪಡಿಸಿದ್ದೇನೆ ಎಂದು ಹೇಳುತ್ತಾರೆ ಹಾಗೂ ನಾನು ಕಂದಾಯ ಇಲಾಖೆಯಲ್ಲಿ ಕೇಳಿದಾಗ ಪ್ಲಾಟ್ ನಂಬರ್ ತಪ್ಪಾಗಿದೆ ಅದನ್ನು ತಿದ್ದುಪಡಿ ಮಾಡಿಕೊಡುತ್ತೇವೆ ಎಂದು ಹೇಳಿದರು ಎಂದು ಹೇಳುತ್ತಾರೆ.

2. ಗುರುಬಸಪ್ಪ ಖರೀದಿ ಮಾಡಿದ ಪ್ಲಾಟ್ ನಂ.21 ಎಂದರೆ ಸರಿ. ಈ ದಾವೆಯಲ್ಲಿ ನಾವು ಪ್ಲಾಟ್ ನಂ.20 ಕ್ಕೆ ಹಿಸ್ಸೆ ಕೊಡಿಸಬೇಕು ಎಂದು ಕೇಳಿದ್ದೇವೆ ಎಂದರೆ ಸಾಕ್ಷಿಯು ನಾವು ಪ್ಲಾಟ್ ನಂ.21 ಕ್ಕೆ ಕೇಳಿದ್ದೇವೆ ಎಂದು ಹೇಳುತ್ತಾರೆ

ಹಾಗೂ ಕಂಪ್ಯೂಟರ್ ಅಪ್ಗ್ರೇಡ್ ಆಗಿದ್ದರಿಂದ ಪ್ಲಾಟ್ ನಂ.20 ಅಗಿದೆ ಎಂದು ಹೇಳುತ್ತಾರೆ. ನಾವು ಪ್ಲಾಟ್ ನಂ.20 ರಲ್ಲಿ ಹಿಸ್ಸೆಯನ್ನು ಕೇಳಿದ್ದೇವೆ ಎಂದರೆ ಸರಿಯಲ್ಲ. ಈಗ ಪ್ಲಾಟ್ ನಂ.21 ಎಂದು ಸುಳ್ಳು ದಾಖಲೆ ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ.

3. ನಿಪಿ.7 ರಲ್ಲಿ ಬರೆದ ಸಂಗತಿಗಳು ನಿಜ ಇದೆ ಎಂದರೆ ಸರಿ. ಪ್ಲಾಟ್ ನಂ.21 ರಲ್ಲಿ ಹಿಸ್ಸೆ ಬೇಕು ಎಂದು ಇವತ್ತು ಪ್ರಥಮವಾಗಿ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ಲಾಟ್ ನಂ.21 ಪ್ರತಿವಾದಿಯರ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ನನ್ನ ಅಜ್ಜ ಪ್ಲಾಟ್ ನಂ.21 ರ ಆಸ್ತಿಯನ್ನು ಒಂದನೇ ಪ್ರತಿವಾದಿಯ ಗಂಡನಿಗೆ ಬಿಟ್ಟುಕೊಟ್ಟ ಆಸ್ತಿ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ನಾನು ಒಂದನೇ ಪ್ರತಿವಾದಿಯ ಗಂಡನ ಹೆಸರನ್ನು ಮ್ಯೂಟೇಶನ ಮಾಡಲು ಅರ್ಜಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಮಗೆ ನಮ್ಮ ಕಾಕಾನ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಸುಮ್ಮನೇ ಹಿಸ್ಸೆ ಕೇಳುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.

**ಪಿಡಬ್ಲ್ಯು – 1**

**ಪಿಡಬ್ಲ್ಯು – 1**